Maski & Lingsugur

## ಜಿಲ್ಲಾಧಿಕಾರಿಗಳು, ರಾಯಚೂರು ರವರ ಕಾರ್ಯಾಲಯದ ನಡವಳಿಗಳು.

ವಿಷಯ : 2010-11 ನೇಯ ಸಾಲಿನ ಪ್ರಕೃತಿ ವಿಕೋಪ ಯೋಜನೆಯ ಪ್ರವಾಹ ಪರಿಹಾರದಡಿ ಮೂಲಭೂತ ಸೌಲಭ್ಯಗಳ ಹಾನಿಯಾಗಿರುವ ಕಾಮಗಾರಿಗಳ ತುರ್ತು ದುರಸ್ಥಿ ಕಾರ್ಯ ಕೈಗೊಳ್ಳಲು ಕ್ರಿಯಾ ಯೋಜನೆಗೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ : 1)ಸರ್ಕಾರದ ಆದೇಶ ಸಂ :ಕಂಇ/350/ಟಿಎನ್ ಆರ್/2010 ದಿನಾಂಕ :30-8-2010.
2)ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ರಾಯಚೂರು ಇವರ ದಿನಾಂಕ : 23-9-2010.

**

**ಪ್ರಸ್ತಾವನೆ :**

2010-11 ನೇಯ ಸಾಲಿನಲ್ಲಿ ಅಗಸ್ಟ ಮಾಹೆಯಲ್ಲಿ ಸುರಿದ ಭಾರಿ ಮಳೆಯಿಂದ ಮಾನವ ಹಾನಿ, ಜಾನುವಾರು ಹಾನಿ, ಮನೆ ಹಾನಿ ಹಾಗೂ ಮೂಲಭೂತ ಸೌಲಭ್ಯಗಳ ಹಾನಿಯಾಗಿರುವ ಕಾಮಗಾರಿಗಳನ್ನು ತುರ್ತಾಗಿ ಆದ್ಯತೆ ಮೇರೆಗೆ ಕೈಕೊಳ್ಳಲು ಉಲ್ಲೇಖ (1) ರ ಸರ್ಕಾರದ ಆದೇಶದನ್ವಯ ಈ ಜಿಲ್ಲೆಗೆ ರೂ.100.00 ಲಕ್ಷಅನುದಾನ ಬಿಡುಗಡೆಯಾಗಿರುತ್ತದೆ. ಸದರಿ ಯೋಜನೆ ಅಡಿ ಪ್ರಸ್ತುತ ಲಭ್ಯವಿರುವ ಅನುದಾನವನ್ನು ಆಧರಿಸಿ ಪ್ರತಿ ವಿಧಾನ ಸಭಾ ಕ್ಷೇತ್ರದಲ್ಲಿ ಮಳೆಯಿಂದ ಹಾನಿಯಾಗಿರುವ ಕಾಮಗಾರಿಗಳ ಪಟ್ಟಿಯನ್ನು ಸಲ್ಲಿಸಲು ಜಿಲ್ಲೆಯ ಎಲ್ಲಾ ಕ್ಷೇತ್ರಗಳ ಮಾನ್ಯ ವಿಧಾನ ಸಭಾ ಸದಸ್ಯರುಗಳವರಿಗೆ ದೂರವಾಣಿ ಮೂಲಕ ಕೋರಲಾಗಿರುತ್ತದೆ.

ಉಲ್ಲೇಖ (2) ರನ್ವಯ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ರಾಯಚೂರು ಇವರು ದೇವದುರ್ಗ, ಲಿಂಗಸೂಗೂರು, ಮಸ್ಕಿ ಮತ್ತು ಸಿಂಧನೂರು ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಹಾನಿಯಾದ ಒಟ್ಟು (54) ಕಾಮಗಾರಿಗಳಿಗೆ ರೂ.146.00 ಲಕ್ಷ ಮೊತ್ತಕ್ಕೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆಗಾಗಿ ಸಲ್ಲಿಸಿರುತ್ತಾರೆ. ಈ ಪೈಕಿ ಉಲ್ಲೇಖ (3) ರ ಆದೇಶದನ್ವಯ ಸಿಂಧನೂರು ತಾಲೂಕಿನ (10) ಕಾಮಗಾರಿಗಳಿಗೆ ರೂ. 25.00 ಲಕ್ಷದ ಅಂದಾಜು ಮೊತ್ತದ ಕ್ರಿಯಾ ಯೋಜನೆಗೆ ಈಗಾಗಲೇ ಮಂಜೂರಾತಿ ನೀಡಿ ಶೇಕಡ 50 ರಷ್ಟು ಅನುದಾನ ರೂ.12.50 ಲಕ್ಷಗಳು ಬಿಡುಗಡೆ ಮಾಡಲಾಗಿರುತ್ತದೆ. ದೇವದುರ್ಗ ತಾಲೂಕಿನ ಕಾಮಗಾರಿಗಳನ್ನು ಹೊರತುಪಡಿಸಿ ಉಳಿದ ಮಸ್ಕಿ ಮತ್ತು ಲಿಂಗಸೂಗೂರು ವಿಧಾನ ಸಭಾ ಕ್ಷೇತ್ರಗಳ ಕ್ರಿಯಾ ಯೋಜನೆಗೆ ಮಂಜೂರಾತಿ ನೀಡಬೇಕಾಗಿರುತ್ತದೆ. ಕಾರಣ ಈ ಕೆಳಗಿನಂತೆ ಆದೇಶ.

**: ಆದೇಶ :**

ಸಂ :ಕಂದಾಯ/ನೈ.ವಿ/ಪ್ರವಾಹ/50/2010-11 ದಿನಾಂಕ : 25-9-2010.

ಪ್ರಸ್ತಾವನೆಯಲ್ಲಿ ಹಾಗೂ ಉಲ್ಲೇಖಿತ ಪತ್ರಗಳಲ್ಲಿ ವಿವರಿಸಿದಂತೆ 2010-11 ನೇಯ ಸಾಲಿನ ಪ್ರಕೃತಿ ವಿಕೋಪ ಯೋಜನೆಯ ಪ್ರವಾಹದ ಅಡಿಯಲ್ಲಿ ಭಾರಿ ಮಳೆಯಿಂದ ಹಾನಿಯಾದ ಮೂಲಭೂತ ಸೌಕರ್ಯಗಳ ತುರ್ತು ರಿಪೇರಿ ಕಾಮಗಾರಿಗಳ ಕ್ರಿಯಾ ಯೋಜನೆ ಈ ಕೆಳಗಿನಂತೆ ಮಂಜೂರಾತಿ ನೀಡಲಾಗಿದೆ. ಸದರಿ ಕಾಮಗಾರಿಗಳನ್ನು ತುರ್ತಾಗಿ ಕೈಗೆತ್ತಿಕೊಳ್ಳಲು ಒಟ್ಟು ಅಂದಾಜು ಮೊತ್ತದ ರೂ. 76.00 ಲಕ್ಷಗಳ ಶೇಕಡ 50 ರಷ್ಟು ಅನುದಾನ ರೂ. 38.00 ಲಕ್ಷ ಹಣ ಬಿಡುಗಡೆ ಮಾಡಬೇಕಾಗಿದ್ದು, ಈ ಪೈಕಿ ಈ ಕಾರ್ಯಾಲಯದ ಪಿ.ಡಿ. ಚೆಕ ಸಂ :ಹೆಚ್. 902583 ದಿನಾಂಕ : 9-9-2010 ರೂ. 10.00 ಲಕ್ಷ ಹಾಗೂ ಚೆಕ ಸಂ :ಹೆಚ್.902586 ದಿನಾಂಕ : 9-9-2010 ರೂ. 20.00 ಲಕ್ಷ ಹೀಗೆ ಒಟ್ಟು ರೂ. 30.00 ಲಕ್ಷ ಮುಂಗಡ ಅನುದಾನ ಈಗಾಗಲೇ ಬಿಡುಗಡೆ ಮಾಡಲಾಗಿರುತ್ತದೆ. ಈಗ ಬಾಕಿ ಉಳಿದ ಅನುದಾನ ರೂ. 8.00 ಲಕ್ಷ(ರೂಪಾಯಿ ಎಂಟು ಲಕ್ಷಗಳು ಮಾತ್ರ) ಗಳು ಈ ಕಾರ್ಯಾಲಯದ ಪಿ.ಡಿ. ಖಾತೆ ಚೆಕ ಸಂ :____________ ದಿನಾಂಕ : __________ ರ ಮೂಲಕ ಬಿಡುಗಡೆ ಮಾಡಿ ಈ ಆದೇಶದೊಂದಿಗೆ ಲಗತ್ತಿಸಿ ಕಳುಹಿಸಲಾಗಿದೆ.

| ಕ್ರ.ಸಂ. | ವಿಧಾನ ಸಭಾ ಕ್ಷೇತ್ರದ ಹೆಸರು. | ಕಾಮಗಾರಿಗಳ ಸಂಖ್ಯೆ. | ಕ್ರಿಯಾ ಯೋಜನೆಯ ಅಂದಾಜು ಮೊತ್ತ. | ಷರಾ. |
|---|---|---|---|---|
| 1 | ಮಸ್ಕಿ. | 13 | ರೂ. 36.00 ಲಕ್ಷ | |
| 2 | ಲಿಂಗಸೂಗೂರು | 15 | ರೂ. 40.00 ಲಕ್ಷ | |
| | ಒಟ್ಟು. | 28 | ರೂ.76.00 ಲಕ್ಷ | |

ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ವಿಭಾಗ, ರಾಯಚೂರು ಇವರು ಈ ಕೆಳಗೆ ಸೂಚಿಸಿದ ನಿಭಂಧನೆಗಳನ್ನು ತಪ್ಪದೇ ಪಾಲಿಸಬೇಕೆಂದು ತಿಳಿಯಪಡಿಸಿದೆ.

**ನಿಬಂಧನೆಗಳು :**

1)ಈಗ ಮಂಜೂರಾತಿ ನೀಡಿದ ಕಾಮಗಾರಿಗಳನ್ನು ಸರಕಾರದಿಂದ ಕಾಲಕಾಲಕ್ಕೆ ಹೊರಡಿಸಿದ ನಿರ್ದೇಶನ/ಆದೇಶ/ನಿಯಮಗಳು/ಕಾಯ್ದೆಗಳನ್ನು ತಪ್ಪದೇ ಕಟ್ಟು ನಿಟ್ಟಾಗಿ ಪಾಲಿಸತಕ್ಕದ್ದು.

2)ಸದರಿ ಮಂಜೂರಾತಿ ನೀಡಿದ ಕಾಮಗಾರಿಗಳ ಅಂದಾಜು ಪತ್ರಿಕೆಗಳನ್ನು ಕೂಡಲೇ ಒಂದು ವಾರದೊಳ ಗಾಗಿ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

3) ಸರಕಾರದ ನಿಯಮಾನುಸಾರ ಸದರಿ ಮಂಜೂರಾತಿ ನೀಡಿದ ಕಾಮಗಾರಿಗಳನ್ನು 30 ರಿಂದ 45 ದಿನಗಳಲ್ಲಿ ಪೂರ್ಣಗೊಳಿಸತಕ್ಕದ್ದು.

4) ಈ ಆದೇಶದಲ್ಲಿ ಮಂಜೂರಿ ನೀಡಿದ ಕಾಮಗಾರಿಗಳಲ್ಲಿ ಯಾವುದಾದರು ಬೇರೆ ಕಾಮಗಾರಿ ಈ ಮೊದಲು ಬೇರೆ ಯೋಜನೆಯಲ್ಲಿ ಮಂಜೂರಿ ಪಡೆದಿದ್ದರೆ ಅಂತಹ ಕಾಮಗಾರಿಗಳನ್ನು ಕೈ ಬಿಡಬೇಕು ಹಾಗೂ ತಕ್ಷಣ ಈ ಕಾರ್ಯಾಲಯಕ್ಕೆ ತಿಳಿಸಬೇಕು. ಕಳೆದ ಸಾಲಿನಲ್ಲಿ ಬಾಕಿ ಉಳಿದಿರುವ ಯಾವುದೇ ಕಾಮಗಾರಿಗಳಿಗೆ ಈಗ ಬಿಡುಗಡೆ ಮಾಡಿದ ಅನುದಾನವನ್ನು ಉಪಯೋಗಿಸುವಂತಿಲ್ಲ.

5) ಅನುಷ್ಠಾನಾಧಿಕಾರಿಗಳು ಕೆಲಸ ಪೂರ್ಣಗೊಂಡ ನಂತರ ಭಾವ ಚಿತ್ರದೊಂದಿಗೆ ಬಿಡುಗಡೆ ಮಾಡಿದ ಹಣಕ್ಕೆ ಹಣ ಬಳಕೆ ಪ್ರಮಾಣ ಪತ್ರ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು,

6) ಈ ಕಾಮಗಾರಿಗಳನ್ನು 3ನೇ ತನಿಕಾ ತಂಡ ಅಂದರೆ ಪ್ರಾಚಾರ್ಯರು ಎಸ್.ಎಲ್.ಎನ್.ಇಂಜಿನಿಯರಿಂಗ್ ಕಾಲೇಜು ಯರಮರಸ ಕ್ಯಾಪ್ ಇವರಿಂದ ತಪಾಸಣೆಗೊಳಪಡಿಸಿ ನ್ಯೂನತೆಗಳಿದ್ದಲ್ಲಿ ಸರಿಪಡಿಸಿ ಅವರಿಂದ ತೃಪ್ತಿಕರವಾಗಿ ಕಾಮಗಾರಿ ಪೂರ್ಣಗೊಂಡ ಬಗ್ಗೆ ವರದಿ ಪಡೆದುಕೊಂಡ ನಂತರವೇ ಕಾಮಗಾರಿಗಳ ಬಿಲ್ಲನ್ನು ಪಾವತಿಸುವುದು.

7) ಕಾಮಗಾರಿ ಪೂರ್ಣಗೊಂಡ ನಂತರ ಮೂಲ ಬಿಲ್ಲುಗಳು, ಭಾವ ಚಿತ್ರ, ಹಣ ಬಳಕೆ ಪ್ರಮಾಣ ಪತ್ರ ಹಾಗೂ 3 ನೇ ತನಿಖಾ ತಂಡದ ವರದಿ ಹಾಗೂ ಮೂಲ ಕಡತ ಈ ಕಾರ್ಯಾಲಯಕ್ಕೆ ಸಲ್ಲಿಸತಕ್ಕದ್ದು.

**ಜಿಲ್ಲಾಧಿಕಾರಿಗಳು,**
**ರಾಯಚೂರು.**

ಲಗತ್ತು :( ಮಂಜೂರಾದ ಕ್ರಿಯಾ ಯೋಜನೆ ಚೆಕ್ಕಿನೊಂದಿಗೆ)

ಗೆ.
ಕಾರ್ಯನಿರ್ವಾಹಕ ಅಭಿಯಂತರರು,
ಪಂ.ರಾ.ಇಂ.ವಿಭಾಗ,ರಾಯಚೂರು.

**ಪ್ರತಿಯನ್ನು ಸೂಕ್ತ ಕ್ರಮಕ್ಕಾಗಿ ಕಳುಹಿಸಲಾಗಿದೆ :**

1)ಸಹಾಯಕ ಆಯುಕ್ತರು, ಲಿಂಗಸೂಗೂರು.
2)ತಹಶೀಲ್ದಾರ, ಲಿಂಗಸೂಗೂರು..
3)ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾ.ಇಂ.ಉಪ ವಿಭಾಗ,ಲಿಂಗಸೂಗೂರು..
4)ಪ್ರಿನ್ಸಿಪಾಲ, ಎಸ.ಎಲ.ಎನ್. ಇಂಜನೀಯರಿಂಗ ಕಾಲೇಜ ಹಾಗೂ 3ನೇ ಪಾರ್ಟಿ ತನಿಖಾಧಿಕಾರಿಗಳು,ರಾಯಚೂರು ಜಿಲ್ಲೆ ಇವರಿಗೆ.

# 2010-11 ನೇ ಸಾಲಿನ ಅಗಸ್ಟ್ ತಿಂಗಳಲ್ಲಿ ಬಿದ್ದ ಭಾರಿಮಳೆಯಿಂದ ಹಾನಿಗೊಳಗಾದ ಕಾಮಗಾರಿಗಳ ವಿವರ

## ಮಸ್ಕಿ ವಿಧಾನ ಸಭಾ ಕ್ಷೇತ್ರ

ತಾಲೂಕು : ಸಿಂಧನೂರು

| ಕ್ರ. ಸಂ | ಕಾಮಗಾರಿಯ ವಿವರ | ರಸ್ತೆಯ ಉದ್ದ | ಅಂದಾಜು ಮೊತ್ತ ( ರೂ.ಲಕ್ಷಗಳಲ್ಲಿ ) | ಷರಾ |
|---|---|---|---|---|
| 1 | ವಿರಾಪಾಪೂರ ಕೂಡು ರಸ್ತೆಯಲ್ಲಿ ಸೇತುವೆ ದುರಸ್ತಿ | 1.00 | 4.00 | |
| 2 | ಬಳಗಾನೂರು - ಜೆಳ್ಳಿಗನೂರು ರಸ್ತೆ ದುರಸ್ತಿ | 0.60 | 4.00 | |
| 3 | ಮುದ್ದಾಪೂರು - ಕೊಟ್ರೇಶ್ವರ್ ಕ್ಯಾಂಪ ರಸ್ತೆ ದುರಸ್ತಿ | 1.00 | 2.00 | |
| 4 | ತುರ್ವಿಹಾಳ - ತಿಡಿಗೋಳ ರಸ್ತೆ ದುರಸ್ತಿ. | 3.00 | 3.00 | |
| 5 | ಉದ್ಬಾಳ ಗ್ರಾಮದ ಹತ್ತಿರ ಸಿ.ಡಿ. ದುರಸ್ತಿ. | 1.00 | 3.00 | |
| | ಒಟ್ಟು | 0.00 | 16.00 | |

ತಾಲೂಕು : ಮಾನವಿ

| ಕ್ರ. ಸಂ | ಕಾಮಗಾರಿಯ ವಿವರ | ರಸ್ತೆಯ ಉದ್ದ | ಅಂದಾಜು ಮೊತ್ತ ( ರೂ.ಲಕ್ಷಗಳಲ್ಲಿ ) | ಷರಾ |
|---|---|---|---|---|
| 1 | ಹಿರೇದಿನ್ನಿ ದಿಂದ ಮಲ್ಲದ ಗುಡ್ಡ ರಸ್ತೆಯಲ್ಲಿ ಸಿ.ಡಿ. ದುರಸ್ತಿ. | 1 | 1.50 | |
| 2 | ಚಿಕ್ಕ ದಿನ್ನಿದಿಂದ ಹಿರೇದಿನ್ನಿ ರಸ್ತೆಯಲ್ಲಿ ಸಿ.ಡಿ. ದುರಸ್ತಿ. | 1 | 1.50 | |
| 3 | ಹಿರೇದಿನ್ನಿ ಗ್ರಾಮದಲ್ಲಿ ಓಟವೆಲ್ ದುರಸ್ತಿ. | 1 | 2.00 | |
| 4 | ತುಗ್ಗಲ ದಿನ್ನಿದಿಂದ ಶಂಕರ ನಗರ ಕ್ಯಾಂಪ ರಸ್ತೆಯಲ್ಲಿ ಸಿ.ಡಿ. ದುರಸ್ತಿ. | 1 | 1.00 | |
| | ಒಟ್ಟು | | 6.00 | |

ತಾಲೂಕು : ಲಿಂಗಸುಗೂರು

| ಕ್ರ. ಸಂ | ಕಾಮಗಾರಿಯ ವಿವರ | ರಸ್ತೆಯ ಉದ್ದ | ಅಂದಾಜು ಮೊತ್ತ ( ರೂ.ಲಕ್ಷಗಳಲ್ಲಿ ) | ಷರಾ |
|---|---|---|---|---|
| 1 | ಸುಲ್ತಾನಪೂರು ಗ್ರಾಮದ ಹತ್ತಿರ ಎಲ್.ಎಲ್.ಸಿ. ದುರಸ್ತಿ. | 1 | 4.00 | |
| 2 | ತಿಮ್ಮಾಪೂರು ಕ್ರಾಸ್ ನಿಂದ ತಿಮ್ಮಾಪೂರು ರಸ್ತೆಯಲ್ಲಿ ಸಿ.ಡಿ. ದುರಸ್ತಿ. | 1 | 2.00 | |
| 3 | ಮಾರಲದಿನ್ನಿ ದಿಂದ ಸಂತೆಕಲ್ಲೂರು ರಸ್ತೆಯಲ್ಲಿ ಸಿ.ಡಿ. ದುರಸ್ತಿ. | | 4.00 | |
| 4 | ಸರ್ಜಾಪೂರು ದಿಂದ ಗುಡದನಾಳ ರಸ್ತೆಯಲ್ಲಿ ಹಾರ್ಡಪ್ಯಾಸೇಜ್ ದುರಸ್ತಿ. | 1 | 4.00 | |
| | ಒಟ್ಟು | | 14.00 | |

Deputy Commissioner
R...

## 2010-11 ನೇ ಸಾಲಿನ ಅಗಸ್ಟ್ ತಿಂಗಳಲ್ಲಿ ಬಿದ್ದ ಭಾರಿಮಳೆಯಿಂದ ಹಾನಿಗೊಳಗಾದ ಕಾಮಗಾರಿಗಳ ವಿವರ

ತಾಲೂಕು : ಲಿಂಗಸುಗೂರ

| ಕ್ರ. ಸಂ | ಕಾಮಗಾರಿಯ ವಿವರ | ರಸ್ತೆಯ ಉದ್ದ | ಅಂದಾಜು ಮೊತ್ತ ( ರೂ.ಲಕ್ಷಗಳಲ್ಲಿ ) | ಷರಾ |
|---|---|---|---|---|
| 1 | 2 | 3 | 4 | 5 |
| 1 | ಹಟ್ಟಿ ಗ್ರಾಮದ ಹತ್ತಿರ ಹಟ್ಟಿ - ಗುರುಗುಂಟಾ ವಯಾ ಕೋಠಾ ರಸ್ತೆಯಲ್ಲಿ ಹಾರ್ಡಪ್ಯಾಸೇಜ್ ದುರಸ್ತಿ ಮಾಡುವುದು | 1 | 2.00 | |
| 2 | ಕೋಠಾ ಗ್ರಾಮದ ಹತ್ತಿರ ಬಿಡ್ಜ್ ದುರಸ್ತಿ | 1 | 5.00 | |
| 3 | ಅಬ್ಬಾಸ ದೊಡ್ಡಿ ರಸ್ತೆಯ ಹತ್ತಿರ ಸಿ.ಡಿ.ಗುರುಗುಂಟಾ - ಹಟ್ಟಿ ಗ್ರಾಮದ ವಯಾ ಕೋಠಾ ದುರಸ್ತಿ | 1 | 2.50 | |
| 4 | ಅನ್ವಾರಿ ದಿಂದ ರೋಡಲಾಬಂಡಾ ರಸ್ತೆಯಲ್ಲಿ ಸಿ.ಡಿ. ದುರಸ್ತಿ | 1 | 2.50 | |
| 5 | ಕುಮಾರಖೇಡ ದಿಂದ ಹೊಕ್ಕಾಣಿ ರಸ್ತೆಯಲ್ಲಿ ಹಾರ್ಡಪ್ಯಾಸೇಜ್ ದುರಸ್ತಿ ಮಾಡುವುದು | 1 | 3.00 | |
| 6 | ಉಪ್ಪಾರನಂದಿಹಾಳ ದಿಂದ ಕಿಲ್ಲಾರಹಟ್ಟಿ ರಸ್ತೆ ದುರಸ್ತಿ | 1 | 2.00 | |
| 7 | ನೀರಲಾಕೇರಾ ದಿಂದ ಮಾವಿನಭಾವಿ ರಸ್ತೆ ದುರಸ್ತಿ | | 1.00 | |
| 8 | ಮರಗಟನಾಳ ಕ್ರಾಸ್ ದಿಂದ ಚಿತ್ತಾನಾಳ ರಸ್ತೆ ದುರಸ್ತಿ | | 2.00 | |
| 9 | ಬೆಳ್ಳಿಹಾಳ ದಿಂದ ಆದಪೂರು ರಸ್ತೆ ದುರಸ್ತಿ | | 1.50 | |
| 10 | ಮಿಂಚೇರಿ ಗ್ರಾಮದ ಕೂಡು ರಸ್ತೆ ದುರಸ್ತಿ | | 3.00 | |
| 11 | ಕುಮಾರಖೇಡ ಗ್ರಾಮದಲ್ಲಿ ಹಾರ್ಡಪ್ಯಾಸೇಜ್ ಕೂಡು ರಸ್ತೆ ದುರಸ್ತಿ | 2 | 5.00 | |
| 12 | ಗುಡದೂರು ದಿಂದ ಹಟ್ಟಿ ಗ್ರಾಮದ ಕೆನಾಲ್ ಕ್ರಾಸ್ ಹತ್ತಿರ ರಸ್ತೆಯಲ್ಲಿ ಸಿ.ಡಿ. ದುರಸ್ತಿ | 1 | 2.50 | |
| 13 | ಗೌಡದೂರು ದಿಂದ ಕೋಠಾ ಗ್ರಾಮದ ಕೆನಾಲ್ ಕ್ರಾಸ್ ಹತ್ತಿರ ರಸ್ತೆಯಲ್ಲಿ ಸಿ.ಡಿ. ದುರಸ್ತಿ | 1 | 2.50 | |
| 14 | ಹಟ್ಟಿ ಕ್ರಾಸ್ ದಿಂದ ಗುಡದನಾಳ ರಸ್ತೆ ದುರಸ್ತಿ | | 2.00 | |
| 15 | ವಂದಲಿ ಹೊಸೂರು ದಿಂದ ಹಟ್ಟಿ ರಸ್ತೆ ದುರಸ್ತಿ | | 3.50 | |
| | **ಒಟ್ಟು** | | **40.00** | |

Deputy Commissioner
Raichur.